<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>

ಸಿಸಿ ನಂಬರ್.214/2024

| | | | |
|---|---|---|---|
| ಸಾಕ್ಷಿಯ ಹೆಸರು | : ಸತೀಶ್ ಕೆ.ಎಸ್. | ಸಿ.ಡಬ್ಲ್ಯು | 4 |
| ತಂದೆಯ ಹೆಸರು | : ಸಿದ್ದಪ್ಪ ಶೆಟ್ಟಿ | ಪಿ.ಡಬ್ಲ್ಯು | 3 |
| ವಯಸ್ಸು | : 42 ವರ್ಷ | | |
| ಉದ್ಯೋಗ | : ಅಬಕಾರಿ ಉಪನಿರೀಕ್ಷಕರು | | |
| ವಾಸ ಸ್ಥಳ | : ಚಿಕ್ಕಮಗಳೂರು | | |

<u>ದಿನಾಂಕ:04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:</u>

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:-</u>

ನಾನು ದಿನಾಂಕ 18.08.2017 ರಿಂದ ದಿನಾಂಕ 06.02.2024 ರವರೆಗೆ ಚಿಕ್ಕಮಗಳೂರು ಉಪ ವಿಭಾಗ ಕಛೇರಿಯಲ್ಲಿ ಅಬಕಾರಿ ಪೇದೆ ಎಂದು ಕೆಲಸ ಮಾಡಿದ್ದೇನೆ.

ದಿನಾಂಕ 11.04.2023 ರಂದು ಚಾಸ-5 ಇವರೊಂದಿಗೆ ನಾನು ಚಾಸ-3 ಮತ್ತು ಚಾಲಕ ಮೊಹಮದ್ದ ಜಾಫರ್ ಎಲ್ಲರೂ ತರೀಕೆರೆಯಿಂದ ಅಜ್ಜಂಪುರಕ್ಕೆ ಹೋಗುವ ಹುಣಸಘಟ್ಟ ರಸ್ತೆಯ ತಿರುವಿನಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸ-5 ರವರಿಗೆ ಕೆ.ಎ.66 ಎ-6964 ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಟವನ್ನು ಮಾಡಲಾಗುತ್ತಿದೆ ಎಂಬ ಖಚಿತವಾದ ಮಾಹಿತಿ ಬಂದಿತು. ನಾವು ರಸ್ತೆಯಲ್ಲಿ ಬರುತ್ತಿದ್ದ ಪಂಚರನ್ನು ಕರೆದು ನಿಲ್ಲಿಸಿ ಅವರಿಗೆ ವಿಚಾರ ತಿಳಿಸಿ ನಮ್ಮ ಜೊತೆ ನಿಲ್ಲಿಸಿಕೊಂಡೆವು. ನಂತರ ಎಲ್ಲರೂ ಸೇರಿ ವಾಹನವನ್ನು ಪರಿಶೀಲನೆ ಮಾಡುತ್ತಿದ್ದಾಗ ಮಾಹಿತಿ ಬಂದ ವಾಹನವು ಕೂಡ ಬಂದಿತು. ಅದನ್ನು ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಒಂದು ಪ್ಲಾಸ್ಟಿಕ್ ಚೀಲದಲ್ಲಿ 90 ಎಮ್.ಎಲ್ ನ 144 ಹೈವೇ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ಇದ್ದವು. ವಿಚಾರಿಸಲಾಗಿ ವ್ಯಕ್ತಿಯ ತನ್ನ ಹೆಸರನ್ನು ಲವ ಎಂದು ತಿಳಿಸಿದನು. ಮದ್ಯವನ್ನು ಸಾಗಾಟ ಮಾಡಲು ವ್ಯಕ್ತಿಯ ಯಾವುದೇ ರಹದಾರಿ ಅಥವಾ ಪರವಾನಗಿ ಇರಲಿಲ್ಲ. ಕಾರಣ ಚಾಸ-5 ರವರು ಚಾಸ-1 ಮತ್ತು 2 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಸಾಕ್ಷಿಯು ಮದ್ಯದ ಖಾಲಿ ಪೌಚುಗಳನ್ನು ನೋಡಿ ಗುರುತಿಸುತ್ತಾರೆ. ಅವುಗಳನ್ನು ಚೀಲದೊಂದಿಗೆ ಮು.ಮಾ-1 ಎಂದು ಗುರುತಿಸಲಾಯಿತು. ಪಂಚನಾಮೆ ಮೇಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. (ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದಾರೆ)

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ಮಾಹಿತಿ ಬಂದಾಗ ಹುಣಸಘಟ್ಟ ಕ್ರಾಸ್ ಹತ್ತಿರ ಇದ್ದೆವು. ನಮಗೆ ಮಾಹಿತಿ ಬಂದಾಗ ಸಮಯ ಸಂಜೆ 5 ಗಂಟೆ ಆಗಿತ್ತು. ಆರೋಪಿ ವಾಹನಕ್ಕಿಂತ ಮೊದಲು ಕೆಲವು ವಾಹನಗಳನ್ನು ಕೂಡ ಪರಿಶೀಲನೆ ಮಾಡಿದ್ದೇವೆ ಆದರೆ ಖಚಿತವಾಗಿ ನೆನಪಿಲ್ಲ. ನಾವು ಆರೋಪಿಯ ಮೇಲೆ ದಾಳಿ ಮಾಡಿಲ್ಲ, ಆತನ ಕಡೆಯಿಂದ ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ಪಂಚನಾಮೆಯನ್ನು ಕೂಡ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮು.ಮಾಲಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಛೇರಿಯ ಅಂಖ್ಯೆ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ಹಾಕಲಾಗಿದೆ ಎಂದರೆ ಸರಿಯಲ್ಲ. ಮು.ಮಾ 1 ರಂತಹ ಖಾಲಿ ಡಬ್ಬಿಗಳು ಮತ್ತು ಬಾಟಲಿಗಳು ಸಾಮಾನ್ಯವಾಗಿ ಬಾರುಗಳಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.**